

ಆಕರ್ಷಕ ಠಾಕೂರ್ ಬಾರಿ ಕಟ್ಟಡ


ಟ್ಯಾಗೋರ್ ಅವರ ಪ್ರತಿಮೆ

ದಟ್ಟ ಮರಗಳ ನಡುವೆ ಇರುವ ಕೆಂಪು ಇಟ್ಟಿಗೆಯ ಈ ಕಟ್ಟಡವು ಹಳೆಯ ವಿನ್ಯಾಸದಲ್ಲೇ ಬಹಳ ಆಕರ್ಷಕವಾಗಿ ಕಾಣುತ್ತದೆ. ಒಳಗೆ ಪ್ರವೇಶಿಸುತ್ತಲೇ, ಇಂಪಾದ ಸಂಗೀತ ಕಿವಿಗೆ ಬೀಳತೊಡಗುತ್ತದೆ. ಅಬನೀಂದ್ರನಾಥ ಟ್ಯಾಗೋರರು ಸ್ಥಾಪಿಸಿದ ಬಂಗಾಲಿ ಕಲಾ ಪ್ರಕಾರದ ಅನೇಕ ಕಲಾಕೃತಿಗಳನ್ನು ಮ್ಯೂಸಿಯಂನಲ್ಲಿ ಪ್ರದರ್ಶಿಸಲಾಗಿದೆ. ರವೀಂದ್ರರ ಬದುಕು, ಅವರು ರಚಿಸಿದ ಮಹಾನ್ ಕೃತಿಗಳು ಹಾಗೂ ಚಿತ್ರಪಟಗಳನ್ನು ಗ್ಯಾಲರಿಗಳಲ್ಲಿ ಸಂಗ್ರಹಿಸಲಾಗಿದೆ.

ಟ್ಯಾಗೋರರ ಚಟುವಟಿಕೆಗಳು ಕೇವಲ ನಮ್ಮ ದೇಶಕ್ಕೆ ಸೀಮಿತವಾಗಿರಲಿಲ್ಲ. ತಮ್ಮ ಜೀವಿತಾವಧಿಯಲ್ಲಿ ಸುಮಾರು 24 ದೇಶಗಳಿಗೆ ಭೇಟಿ ನೀಡಿದ್ದರು. ಆ ದೇಶಗಳೊಂದಿಗೆ ಪರಸ್ಪರ ಬಾಂಧವ್ಯವೃದ್ಧಿಗೆ, ಹೆಚ್ಚಿನ ಸಹಕಾರ ಕೋರಿದರು. ಟ್ಯಾಗೋರ್ ಅವರಿಗೆ ಅಧಿಕೃತ ಸ್ಥಾನಮಾನ ಇಲ್ಲದಿದ್ದರೂ ಸಾಂಸ್ಕೃತಿಕ ರಾಯಭಾರಿಯಾಗಿಯೇ ಅವರು ಭೇಟಿ ಕೊಟ್ಟಿದ್ದರಂತೆ. ಆ ಪ್ರವಾಸಗಳಿಗೆ ಸಂಬಂಧಿಸಿದಂತೆ ಚಿತ್ರಗಳಿವೆ.

ಟ್ಯಾಗೋರರ ಥಾಯ್ಲೆಂಡಿನ ಭೇಟಿ ಬಗ್ಗೆ, ಅಲ್ಲಿನ ರಾಜಕೀಯ ಧುರೀಣರೊಬ್ಬರು, 'ಯಾವುದೇ ಲಾಭ ಅಥವಾ ಹೆಸರು ಮಾಡುವ ಉದ್ದೇಶವಿಲ್ಲದೆ, ಎರಡೂ ದೇಶಗಳ ಬಾಂಧವ್ಯವೃದ್ಧಿಯ ಉದ್ದೇಶದಿಂದ ಮಾತ್ರವೇ, ಟ್ಯಾಗೋರರು ಭೇಟಿ ನೀಡಿರುವುದು ಅತ್ಯಂತ ಶ್ಲಾಘನೀಯ' ಎಂದು ಮೆಚ್ಚುಗೆ ವ್ಯಕ್ತಪಡಿಸಿರುವ ದಾಖಲೆಯನ್ನು ಸಹ ಇಲ್ಲಿ ಪ್ರದರ್ಶಿಸಲಾಗಿದೆ. ಇಲ್ಲಿನ ಗ್ರಂಥಾಲಯದಲ್ಲಿ, ಅಧ್ಯಯನ ನಡೆಸಲಿಚ್ಛಿಸುವ ವಿದ್ಯಾರ್ಥಿಗಳಿಗೆ ಉಪಯೋಗವಾಗುವ ಸಾಕಷ್ಟು ಪುಸ್ತಕಗಳಿವೆ. ಟ್ಯಾಗೋರ್ ಅವರ ಬಗ್ಗೆ ಮೌಲಿಕ ಪುಸ್ತಕಗಳನ್ನೂ 'ರವೀಂದ್ರ ಭಾರತಿ ಮ್ಯೂಸಿಯಂ' ಪ್ರಕಟಿಸಿದೆ.

ಟ್ಯಾಗೋರರು ತಮ್ಮ ಜೀವಿತದ ಕೊನೆಯ ದಿನಗಳನ್ನು ಕಳೆದಿದ್ದು ಈ ಭವನದಲ್ಲೇ. 1940ರಲ್ಲಿ ಅವರ ಆರೋಗ್ಯ ಹದಗೆಟ್ಟಾಗ, ಶಾಂತಿನಿಕೇತನದ ಬಳಿ ಚಿಕಿತ್ಸೆ ಲಭ್ಯವಾಗದೆ, ಅವರನ್ನು ಇಲ್ಲಿಗೆ ಕರೆತರಲಾಯಿತಂತೆ. ಟ್ಯಾಗೋರರು ಸಾವಿಗೆ ಹೆದರಿರಲಿಲ್ಲ. ಅವರು ಕಾವ್ಯದಲ್ಲಿ ಬರೆದಂತೆ,

'ಸಾವು ನನ್ನ ಬಳಿ ಬಂದು, ನಿನ್ನ ದಿನಗಳು ಮುಗಿಯಿತು, ಎಂದರೆ,
ನಾ ಹೇಳುವೆ, ನಾನು ಪ್ರೀತಿಯಲ್ಲೇ ಬದುಕಿರುವೆ, ಕಾಲಹರಣದಲ್ಲಲ್ಲ,
ನಿನ್ನ ಹಾಡುಗಳು ಉಳಿಯುವವೇ ಎಂದು ಕೇಳಿದರೆ, ನಾನರಿಯೆ, ಆದರೆ, ನನಗಿಷ್ಟೇ ಗೊತ್ತು, ನಾನು ಹಾಡಿದಾಗ, ಅನಂತತೆಯನ್ನು ಕಾಣುವೆ...'
ಎಂಬಂತೆ ಬದುಕಿದರು.

1941ರಲ್ಲಿ ಇಹಲೋಕ ತ್ಯಜಿಸಿದ ಟ್ಯಾಗೋರರ ಕೊಠಡಿಯನ್ನೂ ಕಾಣಬಹುದು. ಬಂಗಾಲದ ನವೋದಯಕ್ಕೆ ಕೇಂದ್ರದಂತಿದ್ದ 'ಕವಿಮನೆ'ಯನ್ನು ಸ್ಮಾರಕವಾಗಿಸಿರುವುದು ರವೀಂದ್ರನಾಥ ಟ್ಯಾಗೋರರಂಥ ಮಹಾನ್ ಚೇತನಕ್ಕೆ ಸಂದಿರುವ ಯೋಗ್ಯ ಗೌರವ.

ಪ್ರತಿಕ್ರಿಯಿಸಿ: **feedback@sudha.co.in**

